ಪ್ರವೇಶವಿರಲಿಲ್ಲ. ಚಂದ್ರಕಾಂತಯ್ಯನಿಗೆ ವಾಸ್ತವ ಜಗತ್ತು ಬೇರೆನೇ ಇದೆ ಅನ್ನಿಸತೊಡಗಿತು. 'ಇವ ನಮ್ಮವ' ತತ್ತ್ವ ಚಾಲ್ತಿಯಲ್ಲಿ ಇರಲಿಲ್ಲ. 'ದಯವೇ ಧರ್ಮದ ಮೂಲವಯ್ಯ' ಎಂಬ ಬಸವಣ್ಣನ ಮಾತನ್ನು ಮನುಷ್ಯರಲ್ಲಿ ಹುಡುಕಿದರೆ ಸಿಗುವುದು ಕಷ್ಟವಿತ್ತು. ಚಂದ್ರಕಾಂತಯ್ಯ ಒಮ್ಮೊಮ್ಮೆ ಉಮೇದಿಯಿಂದ, ಒಮ್ಮೊಮ್ಮೆ ಹತಾಶೆಯಿಂದ ಕುಗ್ಗುತ್ತಿದ್ದರೂ ಸ್ವಾಮೀಜಿಗಳ ತಾಳ್ಮೆ ಕಂಡು ಸಮಾಧಾನಿಯಾಗಿರಲು ಯತ್ನಿಸುತ್ತಿದ್ದ. ಚಂದ್ರಕಾಂತಯ್ಯ ತನ್ನ ಹೊಲ- ಮನೆ ಕೆಲ್ಸಗಳನ್ನು ಊರ ಜನ ನೋಡಿ ಕಲಿಯುವಂತೆ ಮಾಡುತ್ತಿದ್ದ.

ಒಮ್ಮೆ ಕೇರಿಯಿಂದ ನಾಕಾರು ಪ್ರಮುಖರು ಸ್ವಾಮೀಜಿಯನ್ನು ಕಾಣಲು ಬಂದರು. ಮಠದ ಒಳಗೆ ಅವರೂ ಬರಲಿಲ್ಲ. ಚಂದ್ರಕಾಂತಯ್ಯ ಸ್ವಾಮೀಜಿಯನ್ನೇ ಮಠದ ಪೌಳಿಯಲ್ಲಿ ಕುಂತು ಮಾತಾಡಲು ವ್ಯವಸ್ಥೆ ಮಾಡಿದ. ಊರ ಹಡಪದ ಕಾಯಕದವರು ಕೇರಿ ಮಂದಿಯ ಕ್ಷೌರ ಮಾಡುತ್ತಿರಲಿಲ್ಲ. ಹಿಂದಿನಿಂದಲೂ ಇದೇ ಸಂಪ್ರದಾಯವಿತ್ತಂತೆ. ಸ್ವಾಮೀಜಿಯವರು 'ನಿಮ್ಮದು ಕ್ಷೌರಿಕ ಕಾಯಕ! ಊರುಕೇರಿ ಮಂದಿಗೆಲ್ಲ ನಿಮ್ಮ ಕಾಯಕ ಮಾಡಲು ಅವಮಾನ ಯಾಕ? ಬಸವಣ್ಣನ ಭಕ್ತರು ನೀವೆಲ್ಲ. 'ಎನ್ನ ತಂದೆ ಮಾದಾರ ಚೆನ್ನಯ್ಯ' ಎಂದು ಬಸವಣ್ಣ ಕೇರಿಮಂದಿಯನ್ನು ತನ್ನ ಸಮಾನವಾಗೇ ಕಾಣ್ತಿದ್ದ. 'ನೀವ್ಯಾಕೆ ಕೇರಿಮಂದಿಗೆ ಕ್ಷೌರ ಮಾಡದಿಲ್ಲ?' ಎಂದು ಕರೆಸಿ ಹೇಳಿದರೂ ಹಡಪದ ಕಾಯಕದವರು ಒಪ್ಪಲಿಲ್ಲ. 'ಕಲ್ಯಾಣದ ಕೇರ್‍ಯಾಗೂ ಶರಣರೇ ಇದ್ದರು. ನಮ್ಮ ಕಾಯಕದವರು ಕ್ಷೌರ ಮಾಡ್ತಿದ್ದರು. ಈ ಊರಾಗ ಅಂಥವರಿಲ್ಲ. ಕೊಳ್ಳಾಗ ಲಿಂಗಯಿಲ್ಲ. ಮಾಂಸ ತಿಂತಾರ' ಎಂದು ಸಿದ್ದಪ್ಪ ಹಡಪದ ತನ್ನ ವಾದ ಮುಂದಿಟ್ಟ. ಸ್ವಾಮೀಜಿಗಳು 'ಜಾತಿಭೇದ ಮಾಡಬ್ಯಾಡ್ರಿ. 'ನಮ್ಮವರು' ಅಂತ ತಿಳಿರಿ ಎಂದು ಹೇಳಿದರೂ ಒಪ್ಪಲಿಲ್ಲ. ಸ್ವಾಮೀಜೀ 'ನಾಳೇ ಕೇರಿ ಮಂದಿ ಬರ್‍ತಾರ. ನೀವು ಬಸವತತ್ತ್ವ ಪಾಲಕರಾಗಿ. ಇಲ್ಲಾಂದ್ರ ನಾನೇ ಕೇರಿ ಮಂದಿಗೆ ಕ್ಷೌರ ಮಾಡ್ತೀನಿ' ಅಂದುಬಿಟ್ಟರು. ಮರುದಿನ ಹಡಪದರು ಯಾರೂ ಉರಲ್ಲಿ ಕಾಣಿಸಲಿಲ್ಲ. ಕೇರಿ ಮಂದಿ ಬಂದು 'ನಮ್ಮ ಮ್ಯಾಲೆ ದಯ ತೋರಿಸಿದ್ರಿ ಅಷ್ಟು ಸಾಕು. ನೀವೇನೂ ನಮ್ಮ ಕ್ಷೌರ ಮಾಡದು ಬ್ಯಾಡ ತಂದೆ. ನೀವು ದೇವರ ಸಮಾನ' ಎಂದು ಕೈಮುಗಿದು ಹೋಗಿದ್ದರು ಕೇರಿಗೆ. ಚಂದ್ರಕಾಂತಯ್ಯನಿಗೆ, ಕೇರಿ ಮಂದಿ ಕೇಳಿದ್ದು, ಹಡಪದರು ನಿರಾಕರಿಸಿದ್ದು ಕಂಡು ಚಿಂತಿಸಲಿಲ್ಲ. ಬದಲಾಗಿ ಸ್ವಾಮೀಜಿ ಕ್ಷೌರ ಮಾಡಲು ಸಿದ್ಧರಾದದ್ದು ಕಂಡು ಹೆಮ್ಮೆಪಟ್ಟಿದ್ದ.

ಹೀಗಿರುವಾಗ ಚಂದ್ರಕಾಂತಯ್ಯ ಇಪ್ಪತ್ತೇಳೋ, ಇಪ್ಪತ್ತೆಂಟೋ ವಯಸ್ಸಿಗೆ ತಲುಪಿದ. ತಂದೆ ತಾಯಿಗಳು ಮದುವೆ ಮಾಡಲು ಹೆಣ್ಣು ಹುಡುಕತೊಡಗಿದ್ದರು. ಕನ್ಯೆ ನೋಡಲು ಮಠದ ಸ್ವಾಮೀಜಿಗೂ ವಿನಂತಿ ಮಾಡಿಕೊಂಡಿದ್ದರು. ಆದರೆ ಚಂದ್ರಕಾಂತಯ್ಯ ಉತ್ಸಾಹ ತೋರಿಸುತ್ತಿರಲಿಲ್ಲ. ಹೊಲ- ಮನೆ ಕೆಲ್ಸ, ಮಠದ ಸೇವೆ ಬಿಟ್ಟರೆ, ಆದಷ್ಟು ಬಡವರ ಮಕ್ಕಳನ್ನು ಹುಡುಕಿ ಶಾಲೆಗೆ ಸೇರಿಸುತ್ತಿದ್ದ. ಕೆಳಜಾತಿ ಸಮುದಾಯಗಳ ಮಕ್ಕಳನ್ನು ಪೋಷಕರ ಮನವೊಲಿಸಿ 'ಬಸವ ಕನ್ನಡ ಪ್ರಾಥಮಿಕ ಶಾಲೆ'ಗೆ ಸೇರಿಸುವ ಮೂಲಕ ಖುಷಿ ಪಡುತ್ತಿದ್ದ. ಸ್ವಾಮೀಜಿಗಳು ಚಂದ್ರಕಾಂತಯ್ಯನ ಜವಾಬ್ದಾರಿಗಳನ್ನು ಕಂಡು ಅಂತರಂಗದಾಗ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದರು. ಆತನ ತಂದೆ- ತಾಯಿ ಬಯಕೆಯಂತೆ ಮದುವೆ ಮಾಡಿಕೊಳ್ಳಲು ಸ್ವಾಮೀಜಿಗಳು ಸಹಜವಾಗಿ ಹೇಳುತ್ತಿದ್ದರು. ಒಮ್ಮೆ ಸ್ವಾಮೀಜಿ ಪರ ಊರಿನ ಭಕ್ತರ ಮನೆಗೆ ಹೋಗುವಾಗ 'ಮಠದ ಕಡೆ ನಿಗಾಯಿಡು ತಮ್ಮ, ಎರಡು ದಿನ ಬಿಟ್ಟು ಬರ್‍ತೀನಿ' ಎಂದು ಸವಾರಿ ಬಂಡಿಯಲ್ಲಿ ಹೊರಟು ಹೋದರು. ತಾಲ್ಲೂಕಿನಿಂದ ಊರಿಗೆ ಮುಂಜಾನೊಮ್ಮೆ, ರಾತ್ರಿಯೊಮ್ಮೆ ಸರ್ಕಾರಿ ಬಸ್ಸು ಬರುತ್ತಿತ್ತು. ಸ್ವಾಮೀಜಿಗಳು ಸವಾರಿ ಬಂಡಿಯಲ್ಲೇ ಊರುಗಳಿಗೆ ಹೋಗಿ ಬರ್‍ತಿದ್ದರು. ಮಠದ ಭಕ್ತರು ಸ್ವಾಮೀಜಿಗಳಿಗೆ ಓಡಾಡಲು ಕಾರು ಖರೀದಿಸುವ ಬಗ್ಗೆ ಸಭೆ ಸೇರಿ ಚರ್ಚೆ ಮಾಡಿದ್ದರು. ಸ್ವಾಮೀಜಿಗಳ ಒಪ್ಪಿಗೆಯನ್ನೂ ಕೇಳಿದ್ದರು. ಎರಡು ದಿನ ಬಿಟ್ಟು ಸ್ವಾಮೀಜಿಗಳು ಮಠಕ್ಕೆ ಬಂದರು. ಚಂದ್ರಕಾಂತಯ್ಯನನ್ನು ಸಂಜೆ ಲಿಂಗಪೂಜೆ ಮುಗಿಸಿದ ಮ್ಯಾಲೆ ಕರದು 'ತಮ್ಮ, ನಾನು ಹೋಗಿದ್ದ ಊರಿನ್ಯಾಗ ನಮ್ಮ ಮಠದ ಭಕ್ತರ ಮನ್ಯಾಗ, ಮಗನಿಗೆ ಆಕಸ್ಮಿಕ ಸಾವು ಬಂದಿತಂತ. ಮದುವೆ ಮಾಡಿ ಎರಡು ವರ್ಷಗಳಾಗಿವೆಯಂತ. ವಿಧವೆಗೆ ಇಪ್ಪತ್ತೆರಡು